ಸಾಧಿಸಬೇಕು ಎನ್ನುವ ಹಪಹಪಿ ಪ್ರತಿಯೊಬ್ಬರಲ್ಲೂ ಇದೆ. ಹಲವಾರು ಜನರ ವೈಯಕ್ತಿಕ ಲೈಬ್ರರಿಯಲ್ಲಿ ವ್ಯಕ್ತಿತ್ವ ವಿಕಸನ, ಯಶಸ್ಸಿನ ಸೂತ್ರಗಳ ಕುರಿತಾಗಿ ಒಂದೆರಡಾದರೂ ಪುಸ್ತಕಗಳು ದೊರೆಯುತ್ತವೆ. ಎಷ್ಟೋ ಜನ ಸ್ಫೂರ್ತಿದಾಯಕ ಭಾಷಣಗಳನ್ನು ಮಾಡುತ್ತಾರೆ. ಯಶಸ್ಸಿನ ಕಡೆಗೆ ಸಾಗುವ ದಾರಿಗಳು ಒಂದೆರಡಲ್ಲ. ಆದರೆ ಯಶಸ್ಸಿನ ಸೂತ್ರ ಪುರುಷರಷ್ಟೇ ಮಹಿಳೆಯರಿಗೂ ಅನ್ವಯಿಸುವಂತಿವೆಯೇ?

ಪರಿಶ್ರಮ, ಏಕಾಗ್ರತೆ, ಸವಾಲುಗಳನ್ನು ಎದುರಿಸುವ ಗುಣ, ನಿರಂತರ ಕಲಿಕೆ ಪ್ರತಿಯೊಂದೂ ಸಾರ್ವತ್ರಿಕ ಎನಿಸಿದರೂ ಯಶಸ್ಸಿನ ಕಡೆಗೆ ಸಾಗುವ ದಾರಿಗಳು ಮತ್ತು ಸವಾಲುಗಳು ಲಿಂಗಾಧಾರಿತವಾಗಿವೆ. ಪುರುಷ ಪ್ರಧಾನವಾಗಿರುವ ಚೌಕಟ್ಟಿನೊಳಗೇ ಹುಟ್ಟಿಕೊಳ್ಳುವ ಈ ಸೂತ್ರಗಳು ಮಹಿಳೆಯರು ಎದುರಿಸುವ ಅಸಮಾನತೆ, ತಾರತಮ್ಯ ಮತ್ತು ಲಿಂಗಾಧಾರಿತ ನಿರೀಕ್ಷೆಗಳನ್ನು ಪರಿಗಣನೆಯಿಂದ ಹೊರಗಿಡುತ್ತವೆ.

‘One is not born, but rather becomes, a woman’ ಎಂದು ಸಿಮೋನ್ ದಿ ಬುವಾ ಹೇಳುವಂತೆ, ಮಹಿಳೆಯಾಗಿ ರೂಪುಗೊಳ್ಳುವಲ್ಲಿ ಸಮಾಜದ ಪಾತ್ರ ಬಹಳಷ್ಟಿದೆ. ಮಹಿಳೆಯರ ಅನುಭವಗಳನ್ನು ರೂಪಿಸುವಲ್ಲಿ ಮತ್ತು ಯಶಸ್ಸಿನ ದಾರಿಗೆ ಪ್ರವೇಶವನ್ನು ನಿರಾಕರಿಸುವಲ್ಲಿ ಸಾಮಾಜಿಕ ಕಟ್ಟಳೆಗಳು ಮುಂದಿವೆ. ಇದನ್ನು ಅರ್ಥ ಮಾಡಿಕೊಳ್ಳಬೇಕೆಂದರೆ ಯಶಸ್ಸನ್ನು ಮಹಿಳಾ ಆಯಾಮದಿಂದ ನೋಡುವುದು ಮುಖ್ಯವಾಗುತ್ತದೆ. ಇಲ್ಲಿ ಸಮಾನತೆಗಿಂತಲೂ ಸಮತೆಯ ದಾರಿಯ ಪ್ರಸ್ತುತ ಹೆಚ್ಚಿದೆ.

ಸಮತೆಯನ್ನು ಸುಲಭವಾಗಿ ಅರ್ಥಮಾಡಿಸುವ ಒಂದು ಉದಾಹರಣೆಯಿದೆ. ಆರಡಿ ಗೋಡೆಯಾಚೆಗೆ ಮೂರು ಜನ ಈ ಬದಿಯಲ್ಲಿ ನಿಂತು ನೋಡುತ್ತಿದ್ದಾರೆ. ಅವರಲ್ಲೊಬ್ಬ ಆರಡಿ ಇದ್ದಾನೆ, ಆತನಿಗೆ ಗೋಡೆಯಾಚೆಗಿನದು ಕಾಣಿಸುತ್ತದೆ. ಇನ್ನೊಬ್ಬ ನಾಲ್ಕಡಿ ಇದ್ದಾನೆ, ಮತ್ತೊಬ್ಬನಿಗೆ ಕಾಲಿಲ್ಲ. ಮೂವರಿಗೂ ಇಲ್ಲಿ ನಾಲ್ಕಡಿ ಕುರ್ಚಿ ತಂದು ಕೊಟ್ಟರೆ ಅದು ಸಮಾನತೆ. ಅದು ಇಲ್ಲಿ ಅನವಶ್ಯಕ. ಯಾಕೆಂದರೆ ಅಗತ್ಯ ಇರುವುದು ಗೋಡೆಯಾಚೆಗೆ ಕಾಣದವರಿಗೆ ಮಾತ್ರ. ಅವರ ಎತ್ತರಕ್ಕೆ ಅನುಗುಣವಾಗಿ ಅನುಕೂಲ ಕೊಟ್ಟು ಮೂವರೂ ಒಂದೇ ಸಮನಾದ ಎತ್ತರವನ್ನು ತಲುಪುವಂತೆ ಮಾಡುವುದು ಸಮತೆ.

ಸರಳವಾಗಿ ಹೇಳಬೇಕೆಂದರೆ, ಒಂದು ಮಗುವಿಗೂ ಒಬ್ಬ ವಯಸ್ಕನಿಗೂ ಜ್ವರ ಬಂದಿದೆ. ಜ್ವರದ ಮಾತ್ರೆ ಮಗುವಿಗೆ ಕೊಡುವ ಪ್ರಮಾಣ ವಯಸ್ಕನಿಗೆ ಕಡಿಮೆಯಾಗುತ್ತದೆ. ವಯಸ್ಕನಿಗೆ ಕೊಡುವ ಔಷಧಿಯ ಪ್ರಮಾಣ ಮಗುವಿಗೆ ಹೆಚ್ಚಾಗುತ್ತದೆ. ರೋಗಿಯ ವಯಸ್ಸು, ಗುಣ ಲಕ್ಷಣ, ದೇಹಸ್ಥಿತಿ ನೋಡಿದ ಮೇಲಷ್ಟೇ ಅವರಿಗೆ ಅನುಗುಣವಾಗಿ ಔಷಧಿ ಕೊಡಲು ಸಾಧ್ಯ. ಯಶಸ್ಸಿನ ಸೂತ್ರಗಳೂ ಅಷ್ಟೇ. ಮಹಿಳೆ ಹಾಗೂ ಪುರುಷರಿಗೆ ಒಂದೇ ಸಮನಾಗಿ ವ್ಯಾಖ್ಯಾನಿಸಲು ಸಾಧ್ಯವಿಲ್ಲದ್ದು. ಒಂದು ಮಗು ಹುಟ್ಟಿದಾಗಲೇ ಲಿಂಗದ ಆಧಾರದ ಮೇಲೆ ಅದಕ್ಕಿರುವ ಅವಕಾಶಗಳಲ್ಲಿ ತಾರತಮ್ಯ ಆರಂಭವಾಗುತ್ತದೆ. ಆತ್ಮವಿಶ್ವಾಸವಿರಲಿ, ಇಲ್ಲ ಎನ್ನುವುದನ್ನು ಕಲಿತುಕೊಳ್ಳಿ, ವಿದ್ಯಾಭ್ಯಾಸಕ್ಕೆ ಆದ್ಯತೆ ಕೊಡಿ ಎನ್ನುವ ಸೂತ್ರಗಳನ್ನು ಬದಿಗಿಟ್ಟು ಹೆಣ್ಣುಮಕ್ಕಳಿಗೆ ಬಾಲ್ಯದಿಂದಲೇ ‘ಹೊಂದಿಕೊಳ್ಳಿ’, ‘ಮೃದುವಾಗಿರಿ’ ಎನ್ನುವ ಧೋರಣೆಗಳನ್ನಷ್ಟೇ ಹೇರಲಾಗುತ್ತದೆ.

ಆತ್ಮವಿಶ್ವಾಸ, ನಾಯಕತ್ವದ ಗುಣಗಳನ್ನು ಹೊಂದಿದ ಹೆಣ್ಣುಮಕ್ಕಳನ್ನು ಬಜಾರಿ ಎಂದೋ, ಗಂಡುಬೀರಿ ಎಂದೋ ಕರೆಯುವ ಸಮಾಜ ಅದೇ ಗುಣಗಳನ್ನು ಹೊಂದಿದ ಗಂಡುಮಗುವನ್ನು ‘ಶಕ್ತಿವಂತ’ ಎಂದು ಹೊಗಳುತ್ತದೆ. ಹೆಣ್ಣುಮಕ್ಕಳು ತಾವು ಮುಂದೆ ಏನಾಗಬೇಕು ಎನ್ನುವುದನ್ನು ಯೋಚಿಸಲು ನಿರ್ಬಂಧ ಹಾಕುವ ಸಮಾಜ ಗಂಡುಮಗುವಿನ ಕನಸುಗಳನ್ನು ಮಹತ್ವಾಕಾಂಕ್ಷೆ ಎನ್ನುತ್ತದೆ.

## ಸಮಾನತೆ ಎನ್ನುವ ಅಪೂರ್ಣ ಆದರ್ಶ

“ನಮ್ಮಲ್ಲಿ ಅರ್ಧದಷ್ಟು ಜನರು ಹಿಂದುಳಿದಿರುವಾಗ ನಾವು ಯಶಸ್ವಿಯಾಗಲು ಹೇಗೆ ಸಾಧ್ಯ” ಎನ್ನುತ್ತಾಳೆ ಮಕ್ಕಳ ಹಕ್ಕುಗಳ ಪ್ರತಿಪಾದಕಿ ಮಲಾಲ. ಮೂಲಭೂತ ಸೌಕರ್ಯಗಳು, ಅವಕಾಶಗಳು, ಪರಿಸ್ಥಿತಿಗಳು ಸಮಾನವಾಗಿಲ್ಲದಿದ್ದಾಗ ಯಾವ ಸೂತ್ರಗಳನ್ನೂ ಸಮಾನವಾಗಿ ಅಳವಡಿಸಿಕೊಳ್ಳುವುದು ಸಾಧ್ಯವಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಶೌಚಾಲಯದ ವ್ಯವಸ್ಥೆಗಳಿಲ್ಲ. ಮೂಲಭೂತ ಅವಶ್ಯಕತೆಗಳ ಕೊರತೆಯಿಂದಾಗಿ ಹೆಣ್ಣುಮಕ್ಕಳು ಶಾಲೆಗೆ ಬರಲು ಹಿಂಜರಿಯುತ್ತಾರೆ. ಮುಟ್ಟಿನ ದಿನಗಳಲ್ಲಿ ಶುಚಿತ್ವದ, ಆರೋಗ್ಯಕರ ವ್ಯವಸ್ಥೆಗಳ ಕೊರತೆಯಿಂದಾಗಿ ಆತ್ಮವಿಶ್ವಾಸ ಕಳೆದುಕೊಳ್ಳುತ್ತಾರೆ. ಬೆಳೆಯುತ್ತಾ ಹೋದಂತೆ ಹೆಣ್ಣುಮಕ್ಕಳ ಆಯ್ಕೆಗಳನ್ನು ಸಮಾಜ ನಿಯಂತ್ರಿಸುತ್ತಾ ಹೋಗುತ್ತದೆ. ಏನು ಓದಬೇಕು, ಏನು ಓದಬಾರದು ಎನ್ನುವುದರಿಂದ ಹಿಡಿದು ಮದುವೆ, ಮಕ್ಕಳು ಸೇರಿದಂತೆ ಎಲ್ಲವನ್ನೂ ಪುರುಷಪ್ರಧಾನ ಸಮಾಜದ ನಿರೀಕ್ಷೆಯಂತೆಯೇ ನಿರ್ಧರಿಸಲಾಗುತ್ತದೆ.

ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಸಬಲರಾಗುತ್ತಿದ್ದರೂ ಸಮಾಜವಾಗಲೀ, ಪುರುಷಪ್ರಧಾನ ವ್ಯವಸ್ಥೆಯಾಗಲೀ ಬದಲಾಗಿಲ್ಲ. ಎಷ್ಟೇ ಓದಿದ ಹೆಣ್ಣುಮಗಳಾದರೂ, ಎಷ್ಟೇ ಉನ್ನತ ಹುದ್ದೆಯಲ್ಲಿರುವವರಾದರೂ ಅವರ ಬದುಕಿನ ಹಲವು ನಿರ್ಧಾರಗಳು ಲಿಂಗಾಧಾರಿತವಾಗಿರುತ್ತವೆ. ಒಬ್ಬ ಪುರುಷನಿಗೆ ಬೆಳಗ್ಗೆ ಎದ್ದು ಜಾಗಿಂಗ್ ಮಾಡಿ, ಆರೋಗ್ಯಕರ ಆಹಾರ ಸೇವಿಸಿ ಕೆಲಸಕ್ಕೆ ಹೊರಡುವುದರಿಂದ ಆತನ ದಿನ ನಿರ್ಧಾರವಾದರೆ, ಅದೇ ಸೂತ್ರವನ್ನು ಅನುಸರಿಸುತ್ತೇನೆ ಎನ್ನುವ ಮಹಿಳೆಗೆ – ತಾನು ಎದ್ದು ಮನೆಕೆಲಸ, ಗಂಡ, ಮಕ್ಕಳ ಆರೈಕೆ ಮುಗಿಸಿ, ಅವರಿಗೆಲ್ಲ ತಿಂಡಿ ಸಿದ್ಧಪಡಿಸಿದ ನಂತರ ಆಯ್ಕೆ ಬರುತ್ತದೆ. ಇದು ತೀರಾ ಸಾಧಾರಣವಾದ ಉದಾಹರಣೆಯಷ್ಟೇ.

ಕೆಲಸಕ್ಕಾಗಿ ಒಬ್ಬ ಪುರುಷ ಎಲ್ಲೋ ಹೊರದೇಶಕ್ಕೆ ತೆರಳಿಯೋ, ಬೇರೆಡೆಯಲ್ಲಿದ್ದೋ ಪ್ರೊಮೋಷನ್ ಗಿಟ್ಟಿಸುವುದು ಸಾಧನೆಯಾದರೆ,

